ರಾಮನಗರ ಜಿಲ್ಲೆಯ 31,723 ಹೆಕ್ಟೇರ್ ಪ್ರದೇಶದಲ್ಲಿ ಮಾವು | 30 ಸಾವಿರ ಬೆಳೆಗಾರರು

ಮಾರುಕಟ್ಟೆಗೆ ಬಂದ ಹಣ್ಣುಗಳ ರಾಜ

ಎಸ್. ರುದ್ರೇಶ್ವರ

• **ರಾಮನಗರ:** ನಗರದ ಎಪಿಎಂಸಿ ಗೆ ವಿವಿಧ ಜಾತಿಯ ಮಾವಿನ ಕಾಯಿಗಳು ಬರತೊಡಗಿವೆ. ಜಿಲ್ಲೆಯಲ್ಲಿ ಮಳೆ ಬೀಳುತ್ತಿದ್ದಂತೆಯೆ ಮಾವಿನ ಕೊಯ್ಲು ಶುರುವಾಗಿದೆ.

ರಾಜ್ಯದಲ್ಲೇ ಮೊದಲ ಬಾರಿಗೆ ರಾಮನಗರ ಜಿಲ್ಲೆಯ ಮಾವು ಮಾರುಕಟ್ಟೆ ಪ್ರವೇಶಿಸುವುದು ವಾಡಿಕೆ. ಬಳಿಕ ಕೋಲಾರ, ಹುಬ್ಬಳ್ಳಿ, ಧಾರವಾಡ ಮಾವು ಮಾರುಕಟ್ಟೆ ಪ್ರವೇಶಿಸುತ್ತವೆ. ಬರ ಮತ್ತು ಹವಾಮಾನ ವೈಪರೀತ್ಯ ದಿಂದಾಗಿ ಕಳೆದ ಸಲ ಶೇ.90ರಷ್ಟು ಬೆಳೆ ಕೈ ಕೊಟ್ಟಿತ್ತು. ಮಾವು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದರು. ಈ ಸಲ ಮಳೆ ಜೊತೆಗೆ ಬೆಳೆಯೂ ಚೆನ್ನಾಗಿದ್ದು, ಉತ್ತಮ ಬೆಲೆಯ ನಿರೀಕ್ಷೆ ಮೂಡಿಸಿದೆ.ಜಿಲ್ಲೆಯ 31,723 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. 30 ಸಾವಿರ ಮಾವು ಬೆಳೆಗಾರರು ಜಿಲ್ಲೆಯಲ್ಲಿದ್ದಾರೆ.

ಶೇ.90ರಷ್ಟು ಬಾದಾಮಿ ಬೆಳೆ: ರಾಮನಗರ ಜಿಲ್ಲೆಯ ಮಾವು ಬೆಳೆಗಾರರು ಶೇ 90ರಷ್ಟು ಬಾದಾಮಿ ತಳಿಯ ಮಾವು ಬೆಳೆಯುತ್ತಾರೆ. ಉಳಿದ ಶೇ 5ರಷ್ಟು ಸೇಂದೂರ ಬಟ್ಟರೆ ರಸಪುರಿ, ತೋತಾಪುರಿ, ಅಮರಪಾಲಿ, ಮಲ್ಲಿಕಾ ತಳಿಯ ಮಾವನ್ನು ಅತಿ ಕಡಿಮೆ ಪ್ರಮಾಣದಲ್ಲಿ ಜಿಲ್ಲೆಯ ಕೆಲವೆಡೆ ಬೆಳೆಯಲಾಗುತ್ತದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಸಲ ಮಾವು ಬೆಳೆ ಉತ್ತಮವಾಗಿದ್ದು, ಶೇ 70ರಷ್ಟು ಇಳುವರಿ ನಿರೀಕ್ಷಿಸಲಾಗಿದೆ. ಕೊಯ್ಲು ಶುರುವಾಗಿ ಕಾಯಿಗಳು ಮಂಡಿಗೆ ಬರಲು ಶುರುವಾಗಿದೆ. ಕೆಲವೆಡೆ ಸೇಂದೂರ ಹಣ್ಣು ಸಿಗುತ್ತಿವೆ. ಇನ್ನೂ 20 ದಿನದೊಳಗೆ ಪೂರ್ಣ ಪ್ರಮಾಣದಲ್ಲಿ ಹಣ್ಣುಗಳು ಮಾರುಕಟ್ಟೆಗೆ ಬರಲಿವೆ ಎಂದರು. ಕಾಯಿಗಳನ್ನು ಹಣ್ಣು ಮಾಡಲು ಯಾವುದೇ ರಾಸಾಯನಿಕ ಸಿಂಪಡಿಸದೆ, ಸ್ವಾಭಾವಿಕವಾಗಿಯೇ ಹಣ್ಣು ಮಾಡಿ ಗ್ರಾಹಕರಿಗೆ ಮಾರಾಟ ಮಾಡುವಂತೆ ಬೆಳೆಗಾರರು ಮತ್ತು ವ್ಯಾಪಾರಿಗಳಿಗೆ ಜಾಗೃತಿ ಮೂಡಿಸುತ್ತಿದ್ದೇವೆ ಎಂದು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಎಂ.ಎಸ್. ರಾಜು. ಹೇಳಿದರು.



ರಾಮನಗರ ಎಪಿಎಂಸಿಯಲ್ಲಿ ವಿವಿಧ ಜಾತಿಯ ಹಣ್ಣು

ಮಳೆಯಾಶ್ರಿತ ತೋಟಗಳಲ್ಲಿ ಫಸಲು ಇಲ್ಲ: ನೀರಾವರಿ ವ್ಯವಸ್ಥೆ ಮಾವಿನ ತೋಟಗಳಲ್ಲಿ ಫಸಲು ಉತ್ತಮವಾಗಿದ್ದು, ಮಳೆಯಾಶ್ರಿತ ತೋಟದಲ್ಲಿ ಅಷ್ಟಾಗಿ ಹೇಳಿಕೊಳ್ಳು ವಂತಿಲ್ಲ. ಈಗಾಗಲೇ ಸುರಿದ ಮಳೆಗೆ ಸಣ್ಣ ಕಾಯಿಗಳು ಉದುರಿವೆ ಎಂದು ಮಾವು ಬೆಳೆಗಾರ ಕುಮಾರಸ್ವಾಮಿ ತಿಳಿಸಿದರು. ಕಾಯಿಗಳು ಮರದಲ್ಲೇ ಹಣ್ಣಾಗಲಿ ಎಂದು ಇನ್ನೂ ಸ್ವಲ್ಪ ದಿನ ಬಿಡಬೇಕು ಎನಿಸುತ್ತದೆ. ಆದರೆ, ಮತ್ತೇನಾದರೂ ಜೋರಾಗಿ ಮಳೆ ಸುರಿದರೆ ಅಥವಾ ಆಲಿಕಲ್ಲು ಮಳೆಯಾದರೆ ಕಾಯಿಗಳು ನೆಲ ಕಚ್ಚಲಿವೆ. ಹಾಗಾಗಿ, ಬಲಿತ ಕಾಯಿಗಳನ್ನು ಕೊಯ್ಲು ಮಾಡಿ ಮಂಡಿಗೆ ತಂದು ಹಾಕುತ್ತಿದ್ದೇವೆ ಎಂದರು.

ವಿಗಂತ ವಿಶೇಷ

ರಾಮನಗರ ಜಿಲ್ಲೆಯ ಮಾವು ರಾಜ್ಯದ ವಿವಿಧ ಭಾಗ ಅಲ್ಲದೇ ಮಹಾರಾಷ್ಟ್ರ, ಆಂಧ್ರ ಪ್ರದೇಶ, ಕೇರಳ, ಗುಜರಾತ್ಗೆ ಹೋಗುತ್ತದೆ. ಕಾಯಿಗಳ ಕೊಯ್ಲು ಶುರುವಾಗುತ್ತಿದ್ದಂತೆ ಅಲ್ಲಿನ ವ್ಯಾಪಾರಿಗಳು ಬಂದು ಖರೀದಿಸುತ್ತಾರೆ ಎಂದು ಮಾವು ವ್ಯಾಪಾರಿ ಸೈಯ್ಯದ್ ಮತೀನ್ ತಿಳಿಸಿದರು.

ಸಗಟು ದರ ಪ್ರತಿ ಕೆ.ಜಿ.ಗೆ

ಮಾವು	ದರ (ಕನಿಷ್ಟ-ಗರಿಷ್ಟ)
ಬಾದಾಮಿ	120-160
ಸೇಂದೂರ	70-100
ರಸಪೂರಿ	150
ಮಲ್ಲಿಕಾ	110-120
ತೋತಾಪುರಿ	20-25

ಶೇ.70ರಷ್ಟು ಉತ್ತಮ ಇಳುವರಿ

ತೋಟಗಾರಿಕಾ ಇಲಾಖೆ ಸಿಬ್ಬಂದಿ ಜಿಲ್ಲೆಯ ಹಲವು ತೋಟಗಳಿಗೆ ತೆರಳಿ ಸಮೀಕ್ಷೆ ನಡೆಸಿದೆ. ಶೇ .70ರಷ್ಟು ಇಳುವರಿ ಚೆನ್ನಾಗಿರುವುದು ಕಂಡು ಬಂದಿದೆ. ಇತ್ತೀಚೆಗೆ ಸುರಿದ ಮಳೆಯಿಂದ ಮಾವಿನ ಕಾಯಿಗಳಿಗೆ ಆಷ್ಟಾಗಿ ಹೊಡೆತ ಬಿದ್ದಿಲ್ಲ. ಸದ್ಯ ಮಾರುಕಟ್ಟೆಯ ಕೆಲವೆಡೆ ಸೇಂದೂರ ಹಣ್ಣು ಸಿಗುತ್ತಿವೆ. ಈ ತಿಂಗಳ ಮೂರನೇ ವಾರದಲ್ಲಿ ಬಾದಾಮಿ ಮಾವು ಮಾರುಕಟ್ಟೆ ಪ್ರವೇಶಿಸಲಿದೆ. ಜೂನ್ ಅಂತ್ಯದವರೆಗೆ ಮಾವಿನ ಋತು ಇರಲಿದೆ ಎನ್ನುತ್ತಾರೆ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಎಂ.ಎಸ್. ರಾಜು ತಿಳಿಸಿದರು.

ಹಿಂದೆ ನಾವೇ ತೋಟಗಳನ್ನು ವಹಿಸಿಕೊಂಡು ಕೊಯ್ಲು ಮಾಡುತ್ತಿದ್ದವು. ಇತ್ತೀಚೆಗೆ ಹವಾಮಾನ ವೈಪರೀತ್ಯದಿಂದಾಗಿ ವ್ಯಾಪಾರಿಗಳು ತೋಟಗಳನ್ನು ವಹಿಸಿಕೊಳ್ಳುವುದು ಕಡಿಮೆಯಾಗಿದೆ. ರೈತರೇ ಕೊಯ್ಲು ಮಾಡಿಕೊಂಡು ತರುತ್ತಾರೆ ಎಂದರು.

Hosadiganta pg 10

For more information visit
University Library Website
Web - uasbagrilibindia.org
E-mail- librarian@uasbangalore.edu.in

V-karnataka pg 06

ಟೊಮೆಟೊ ಬೆಳೆ ಭರಪೂರ, ಪಾತಾಳಕ್ಕೆ ದರ

■ **ವಿಕ ಸುದ್ದಿಲೋಕ** ಬೆಂಗಳೂರು

ಏಕಾಏಕಿ ಟೊಮೆಟೊ ದರ ಪಾತಾಳಕ್ಕೆ ಕುಸಿದಿದ್ದು, ರೈತರು ಕಂಗಾಲಾಗಿದ್ದಾರೆ. ಇದರ ಪರಿಣಾಮ ಟೊಮೆಟೊ ಬೆಳೆಯು ಕೆಲವೆಡೆ ದನಗಳಿಗೆ ಆಹಾರ ವಾದರೆ, ಮತ್ತೆ ಕೆಲವೆಡೆ ಚರಂಡಿ ಪಾಲಾಗುತ್ತಿದೆ. ಇನ್ನೂ ಕೆಲವೆಡೆ ತೋಟಗಳಲ್ಲೇ ಕೊಳೆಯುತ್ತಿದೆ.

ಈ ಬಾರಿ ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಹೆಚ್ಚು ರೈತರು ಟೊಮೆಟೊ ಬೆಳೆದಿದ್ದಾರೆ. ಜತೆಗೆ, ಬಿಸಿಲ ವಾತಾವರಣದಿಂದಾಗಿ ಕಾಯಿಗಳು ಬೇಗ ಹಣ್ಣಾಗುತ್ತವೆ. ಆಲ್ಲದೆ, ಹೊರರಾಜ್ಯಗಳಲ್ಲೂ ಟೊಮೆಟೊ ಹೆಚ್ಚಾಗಿ ಬೆಳೆದಿರುವುದರಿಂದ ಕರ್ನಾಟಕದಿಂದ ಬೇರೆ ರಾಜ್ಯಗಳಿಗೆ ಹಣ್ಣು ರವಾನೆ ಯಾಗುತ್ತಿಲ್ಲ. ಹೀಗಾಗಿ, ಮಾರುಕಟ್ಟೆಗೆ ಹಣ್ಣು ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿದ್ದು, ಬೇಡಿಕೆಯಿಲ್ಲದೆ ಬೆಲೆಗಳು ಕುಸಿದಿವೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಟೊಮೆಟೊ ದರ ಪ್ರತಿ ಕೆ.ಜಿಗೆ 10 ರೂ. ಗೆ ಇಳಿದಿದೆ, ಗದಗ ಜಿಲ್ಲೆಯಲ್ಲಿ ರೈತರಿಂದ ಖರೀದಿಸುವ ದರ ಕೆ.ಜಿಗೆ 2 ರೂ., ಈ ಹಿಂದೆ ಕೆ.ಜಿಗೆ 40-60 ರೂ. ಇತ್ತು. ರೈತರಿಗೆ ಎಕರೆಗೆ 30-40 ಸಾವಿರ ರೂ. ನಷ್ಟವಾಗಿದೆ. ಧಾರವಾಡ

ಕಟಾವು ಮಾಡಿದ ಕೂಲಿಯೂ ಸಿಗುತ್ತಿಲ್ಲ



ಟೊಮೆಟೊ ದರ (ಕೆ.ಜಿ.ಗಳಲ್ಲಿ)

■ ಕೋಲಾರ ಎಪಿಎಂಸಿ	₹3- 10
■ ಯಶವಂತಪುರ ಎಪಿಎಂಸಿ	₹10-15
■ ಹಾಪ್‌ಕಾಮ್ಸ್	₹18
■ ತಳ್ಳುಗಾಡಿ (ಬೆಂಗಳೂರು)	₹15-20

ಜಿಲ್ಲೆಯಲ್ಲಿ ಪ್ರತಿ ಕೆ.ಜಿ. ಗೆ 15-20 ರೂ. ಗೆ ಮಾರಾಟವಾಗುತ್ತಿದೆ.

ಬಳ್ಳಾರಿ ಜಿಲ್ಲೆಯಲ್ಲಿ 60 ಹೆಕ್ಟೇರ್ ಪ್ರದೇಶದಲ್ಲಿ ಟೊಮೆಟೊ ಬೆಳೆ ಬಿತ್ತನೆಯಾಗಿದೆ. ಮಾರುಕಟ್ಟೆಯಲ್ಲಿ ಸದ್ಯ ಪ್ರತಿ ಕೆ.ಜಿಗೆ 10 ರೂ.ಬೆಲೆಯಿದೆ. ಪ್ರತಿ ಎಕರೆಗೆ 50 ಸಾವಿರ ರೂ. ಖರ್ಚು ಬರಲಿದೆ. ಎಕರೆಗೆ 4 ಸಾವಿರ ಕೆ.ಜಿ ಇಳುವರಿ ಬಂದರೂ ಮಾರುಕಟ್ಟೆಯಲ್ಲಿ ಬೆಲೆ ಇಲ್ಲದಂತಾಗಿದೆ. ಇದರಿಂದ ಹಲವೆಡೆ ಟೊಮೆಟೊ ಕಟಾವು ಮಾಡದೆ ಜಮೀನಿನಲ್ಲಿ ಹಾಗೇ ಬಿಡಲಾಗಿದೆ. ಇನ್ನೂ ಕೆಲವೆಡೆ ರೈತರೆ ಖಾಸಗಿ ವಾಹನಗಳ ಮೂಲಕ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಮಾರಾಟಕ್ಕೆ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ 40 ಹೆಕ್ಟೇರ್ ಪ್ರದೇಶದಲ್ಲಿ ಟೊಮೆಟೊ ಬಿತ್ತನೆಯಾಗಿದೆ. ಸದ್ಯ ಮಾರುಕಟ್ಟೆಯಲ್ಲಿ ಕೆ.ಜಿಗೆ 15 ರೂ. ಬೆಲೆಯಿದೆ.

ವಿಜಯನಗರ ಜಿಲ್ಲೆಹೊಸಪೇಟೆಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಾಲ್‌ಗೆ ಕಳೆದ ಮೂರು ತಿಂಗಳಿನಿಂದ 500 -600 ರೂ. ಆಸುಪಾಸಿನಲ್ಲಿದೆ. ಜಿಲ್ಲೆಯಲ್ಲಿ 1500 ಎಕರೆ ಟೊಮೆಟೊ ಬೆಳೆಯಲಾಗಿದೆ. ಉತ್ಪಾದನೆ ಹೆಚ್ಚಾಗಿರುವುದರಿಂದ ದರ ಕುಸಿತಗೊಂಡಿದೆ.

ಕಟಾವೂ ಮಾಡಿಲ್ಲ: ಚಾಮರಾಜನಗರ ಜಿಲ್ಲೆಯಲ್ಲಿ ರೈತರಿಂದ 5 ರೂಪಾಯಿಗೆ ಖರೀದಿಸಲಾಗುತ್ತಿದೆ. ಗ್ರಾಹಕರಿಗೆ 15 ರೂ.ಗೆ ಮಾರಾಟವಾಗುತ್ತಿದೆ. ಇಷ್ಟು ಕಡಿಮೆ ಬೆಲೆ ಮಾರಾಟ ಮಾಡಿದರೆ ಕಟಾವು ವೆಚ್ಚವೂ ಸಿಗಲಾರದು ಎಂಬ ಕಾರಣಕ್ಕೆ ಬೆಳೆಗಾರರು ಜಮೀನಿನಲ್ಲೇ ಟೊಮೆಟೊ ಬಿಟ್ಟಿದ್ದಾರೆ. ಜಿಲ್ಲೆಯ 4 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಟೊಮೆಟೊ ಬೆಳೆಯಲಾಗಿದ್ದು, ಶೇ.30ರಷ್ಟು ಬೆಳೆಗಾರರು ಕಟಾವಿನ ಗೊಡವೆಗೇ ಹೋಗಿಲ್ಲ.

ರಾಯಚೂರು ಜಿಲ್ಲೆಯಲ್ಲಿ ಗುಣಮಟ್ಟದ ಟೊಮೆಟೊ 10 ರೂ. ಕೆ.ಜಿಯಂತೆ ಮಾರಾಟವಾಗುತ್ತಿದೆ. ಸಾದಾ ಟೊಮೆಟೊ ಕೆ.ಜಿಗೆ 5-6ರೂ. ದರವಿದೆ. ಜಿಲ್ಲಾದ್ಯಂತ 350 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದು, 200 ಹೆಕ್ಟೇರ್‌ನಲ್ಲಿ ಕಟಾವು ಮಾಡಲಾಗಿದೆ. 150 ಹೆಕ್ಟೇರ್‌ನಷ್ಟು ಕಟಾವು ಆಗಬೇಕಿದೆ. ಪ್ರತಿ ಕೆ.ಜಿ 10-15 ರೂ.ಗಳಿಗೆ ಮಾರಾಟವಾದರಷ್ಟೇ ಲಾಭ ಎನ್ನುವ ಬಹುತೇಕ ರೈತರು ಕಟಾವು ಗೊಡವೆಗೆ ಹೋಗಿಲ್ಲ. ವಿಜಯ ಪುರ ಬಾಗಲಕೋಟೆ ಜಿಲ್ಲೆಗಳಲ್ಲಿ 8 ರಿಂದ 10 ರೂ. ಗಳಿಗೆ ಮಾರಾಟವಾಗುತ್ತಿದೆ.

ಬದುಕು ಹಸನಾಗಿಸಿದ ಪಪ್ಪಾಯ

■ ಶರಣು ಮರನೂರ

ವಿಜಯಪುರದ ಇಂಡಿ ಎಂದರೆ ಸಾಕು ಕುಡಿಯುವ ನೀರಿಗೂ ಪರದಾಡಬೇಕಾದ ಶೋಚನಿಯ ಸ್ಥಿತಿ ಕಣ್ಣಮುಂದೆಯೇ ಬಂದು ಬಿಡುತ್ತದೆ. ಆದರೆ ಅದೇ ತಾಲೂಕಿನ ಓರ್ವ ಯುವಕ ಕೇವಲ ಎರಡೆ ಎಕರೆ ಜಮೀನಿನಲ್ಲಿ 50 ಟನ್ ಪಪ್ಪಾಯ ಬೆಳೆದು ಬದುಕು ಹಸನಾಗಿಸಿಕೊಂಡಿದ್ದಾನೆ.

ಇಂಡಿ ತಾಲೂಕಿನ ತೆನಿಹಳ್ಳಿ ಗ್ರಾಮದ ಶ್ರೀಶೈಲ ಪೂಜಾರಿ ಎಂಬ ಯುವಕ ತಮ್ಮ ತೋಟದಲ್ಲಿ ನೀರಿನ ಕೊರತೆ ಇದ್ದಾಗ್ಯೂ ಮೊದಲು ಹನಿ ನೀರಾವರಿ ಬಳಿಸಿ ಸಸಿಗಳನ್ನು ಬೆಳೆಸಿದ್ದು, ನಂತರ ಅವುಗಳು ದೊಡ್ಡದಾಗಿ ಬೆಳೆಯುತ್ತಿದ್ದಂತೆ ಗಿಡದ ಬುಡಕ್ಕೆ ಹರಿ ನೀರು ಹಾಯಿಸಿ ಕಡಿಮೆ ನೀರಲ್ಲಿ ಉತ್ತಮ ಫಸಲು ತೆಗೆಯುವಲ್ಲಿ ಯಶಸ್ವಿಯಾಗಿದ್ದಾನೆ.



ಈ ಮೊದಲು ಸ್ವಲ್ಪ ನಿಂಬೆ ಗಿಡ ಹಾಗೂ ಉಳಿದ ಜಮೀನಿನಲ್ಲಿ ಮುಂಗಾರು ತೊಗರಿ ಬಿತ್ತನೆ ಮಾಡುತ್ತಿದ್ದರು. ಇನ್ನೂ ಕೆಲ ಬಾರಿ ಇರುಳ್ಳಿ, ಬದನೆ, ನುಗ್ಗೆ, ಕೊತ್ತಂಬರಿ ಸೇರಿದಂತೆ ವಿವಿಧ ತರಕಾರಿಗಳನ್ನು ಬೆಳೆದರೂ ಆದಾಯ ಮಾತ್ರ ಅಷ್ಟಕಷ್ಟೆ. ಏನಾದರೂ ಮಾಡಲೆಬೇಕು ಎನ್ನುವ ಛಲದಿಂದ ಯುವಕ ಶ್ರೀಶೈಲ ಸಾವಿರ ಪೂಟ್‌ನ ಐದಾರು ಬೋರ್‌ವೆಲ್ ಕೊರೆಯಿಸಿದ. ಆದರೆ ನೀರು ಸಿಕ್ಕಿದ್ದು ಮಾತ್ರ ಕೇವಲ ಒಂದೆ ಬೋರ್‌ವೆಲ್‌ನಲ್ಲಿ. ಇನ್ನೂಳಿದ 4 ಬೋರವೆಲ್‌ನಲ್ಲಿ ಧೂಳು ಹಾರಿದ್ದು ಬಿಟ್ಟರೇ ಹನಿ ನೀರು ಬರಲಿಲ್ಲ.

ನೀರು ಸಿಕ್ಕಿದ್ದ ಒಂದು ಬೋರ್‌ವೆಲ್ ಅದು ಸಹಿತ ಐದಾರು ಗಂಟೆಗಲ್ಲಿ ನೀರು ನಿಂತು ಹೋಗುತ್ತಿತ್ತು. ತಡ ಮಾಡದ ಶ್ರೀಶೈಲ 50*50 ಅಳತೆಯ ಹೊಂಡ ತೆಗೆದು ಅದರಲ್ಲಿ ಇದೇ ನೀರು ತುಂಬಿಸಿದ. ನಂತರ ಪಪ್ಪಾಯ ತಂದು ನೆಟ್ಟು ಹನಿ ನೀರಾವರಿ ಮೂಲಕ ನೀರು ಹಾಯಿಸಿ ನಿರೀಕ್ಷೆಗೂ ಮೀರಿದ ಫಸಲು ತೆಗೆಯುವಲ್ಲಿ ದು ಪಡೆದುಕೊಂಡು, ಬರಗಾಲದ ಊರಲ್ಲೂ ಬಂಗಾರದ ಬೆಳೆ ಬೆಳೆದಿದ್ದಾನೆ.

12 ಲಕ್ಷ ರೂ ಆದಾಯ...

ಸದ್ಯ ಮಾರುಕಟ್ಟೆಯಲ್ಲಿ ಕೆಜಿ ಪಪ್ಪಾಯಕ್ಕೆ 25 ರಿಂದ 30 ರೂಪಾಯಿ ಇದೆ. ಈಗಾಗಲೇ 14 ಟನ್ ಮಾರಾಟ ಮಾಡಿದ್ದು ಇನ್ನೂ 40 ರಿಂದ 45 ಟನ್‌ಗಳಷ್ಟು ಪಪ್ಪಾಯ ಬರುವ ನಿರೀಕ್ಷೆ ಇದೆ. ಕೇವಲ 9 ತಿಂಗಳ ಬೆಳೆ ಬೆಳೆದು ಮಾದರಿ ಯುವ ರೈತನಾಗಿ ಗುರುತಿಸಿಕೊಂಡಿದ್ದಾನೆ.

S-karnataka Pg 06

ಸರಕಾರದ ಅನಾದರಣೆ, ಕುಸಿದ ಧಾರಣೆ



ಜಿಲ್ಲಾ ನೋಟ

ನ ಬಸವರಾಜ ನಾಗಡದಿನ್ನಿ,ರಾಯಚೂರು

ಅನ್ನದಾತರ ಹಣೆ ಬರಹವೇ ಸರಿ ಇದ್ದಂತೆ ಕಾಣುತ್ತಿಲ್ಲ. ಸದಾ ಒಂದಿಲ್ಲೊಂದು ಸಮಸ್ಯೆಯ ಸುಳಿಗೆ ಸಿಲುಕುವ ರೈತರು, ಎಷ್ಟೇ ಶ್ರಮ ಪಟ್ಟರೂ ಪ್ರತಿಫಲ ಮಾತ್ರ ಸರಿಯಾಗಿ ಸಿಗುತ್ತಿಲ್ಲ. ಜಿಲ್ಲೆಯಲ್ಲಿ ಒಣ ಮೆಣಸಿನಕಾಯಿ ಬೆಳೆದ ರೈತ ಬೆಲೆ ಕುಸಿತಕ್ಕೆ ಆಘಾತಗೊಂಡಿದ್ದಾನೆ. ಬೆಳೆಗೆ ಮಾಡಿದ ಖರ್ಚು ಕೂಡ ಸಿಗದೆ ಸಾಲದ ಶೂಲಕ್ಕೆ ಸಿಲುಕುವಂತಾಗಿದೆ. ಕಳೆದ ಎರಡು ಮೂರು ವರ್ಷಗಳ ಹಿಂದೆ ಒಣ ಮೆಣಸಿನಕಾಯಿ ಅಂದ್ರೆ ಬಂಪರ್ ಬೆಳೆ ಅಂತಲೇ ರೈತರು ನಂಬಿದ್ದರು. ಆದರೆ ಈ ವರ್ಷ ಮೆಣಸಿನಕಾಯಿ ಬೆಳೆದ ಅನ್ನದಾತರು ಬೀದಿಗೆ ಬರುವಂತಾಗಿದೆ.

ಬ್ಯಾಡಗಿ -ಗುಂಟೂರು

ಒಂದೆಡೆ ಬೆಳೆಗೆ ಸರಿಯಾದ ಮಾರುಕಟ್ಟೆ ಸಿಗುತ್ತಿಲ್ಲ. ಮೆಣಸಿನಕಾಯಿ ಮಾರಾಟ ಮಾಡಲು ಹಾವೇರಿ ಜಿಲ್ಲೆಯ ಬ್ಯಾಡಗಿಗೆ ಅಥವಾ ಆಂಧ್ರಪ್ರದೇಶದ ಗುಂಟೂರಿಗೆ ಹೋಗಬೇಕಾದ ಪರಸ್ಥಿತಿ ಇದೆ. ದಿನದಿಂದ ದಿನಕ್ಕೆ ಮೆಣಸಿನಕಾಯಿ ಬೆಲೆ ಪಾತಾಳಕ್ಕೆ ಕುಸಿಯುತ್ತಿದೆ. ರಾಯಚೂರು ಜಿಲ್ಲೆಯ ಮೆಣಸಿನಕಾಯಿ ಬೆಳೆಗಾರರಿಗೆ ದಾರಿ ಕಾಣದಂತಾಗಿದೆ.

- ಸಾಲಗಾರನಾದ ಮೆಣಸಿನಕಾಯಿ ಬೆಳೆಗಾರ
- ಖರ್ಚು ಮಾಡಿದಷ್ಟು ಹಣವೂ ಸಿಗುತ್ತಿಲ್ಲ
- ಖರೀದಿ ಕೇಂದ್ರಗಳನ್ನ ತೆರೆಯದ ಸರಕಾರ
- ಕೋಲ್ಡ್ ಸ್ಟೋರೇಜ್ ನಲ್ಲಿ 26 ಸಾವಿರ ಟನ್

ಖರೀದಿ ಕೇಂದ್ರ ಬೇಕು

ಸರಕಾರ ಖರೀದಿ ಕೇಂದ್ರ ಆರಂಭಿಸಿ ಬೆಂಬಲ ಬೆಲೆಯಲ್ಲಿ ಖರೀದಿಗೆ ಮುಂದಾದರೆ, ಮಾತ್ರ ಬೆಲೆ ಏರಿಕೆ ಕಾಣಲು ಸಾಧ್ಯ. ಸರಕಾರ ಖರೀದಿ ಕೇಂದ್ರ ಆರಂಭಿಸಲು ಮುಂದಾಗಬೇಕು ಎನ್ನುವುದು ರೈತರ ಒತ್ತಾಸೆ. ರಾಯಚೂರು ಜಿಲ್ಲೆಯಲ್ಲಿ ಐದು ಬೇರೆ ಬೇರೆ ತಳಿಯ ಮೆಣಸಿನಕಾಯಿ ಬೆಳೆಯಲಾಗುತ್ತಿದ್ದು, ಈ ವರ್ಷದ ಬ್ಯಾಡಗಿಯ ಮಾರುಕಟ್ಟೆಯಲ್ಲಿ ಮೆಣಸಿನ ಕಾಯಿ ಬೆಲೆ ಪ್ರತಿ ಕ್ವಿಂಟಾಲ್ ಗೆ ಈ ಕೆಳಗಿನಂತಿದೆ.

ಮೂವತ್ತು ಸಾವಿರ ಎಕರೆ

ಜಿಲ್ಲೆಯಲ್ಲಿ ಭತ್ತ, ಹತ್ತಿ ಬಿಟ್ಟರೆ ಅತಿ ಹೆಚ್ಚಾಗಿ ಮೆಣಸಿನಕಾಯಿ ಬೆಳೆಯಲಾಗುತ್ತಿದೆ. ಸುಮಾರು ಮೂವತ್ತು ಸಾವಿರಕ್ಕಿಂತಲೂ ಅಧಿಕ ಎಕರೆ ಪ್ರದೇಶದಲ್ಲಿ ಮೆಣಸಿನಕಾಯಿ ಬೆಳೆಯಲಾಗಿದ್ದು, ಬೆಲೆ ಕುಸಿತ ಬಾಧೆ ಒಂದೆಡೆಯಾದರೆ ವಾತಾವರಣ ದಿಂದ ಕಲರ್ ಮಾಸುವ ಮೂಲಕ ಬಿಳಿ ಬಣಕ್ಕೆ ತಿರುಗುವ ಅಪಾಯವಿದೆ.

26 ಸಾವಿರ ಟನ್ ದಾಸ್ತಾನು

ಒಂದು ಎಕರೆ ಮೆಣಸಿನಕಾಯಿ ಬೆಳೆಯಲು 1 ಲಕ್ಷ ರು.ಖರ್ಚು ಮಾಡಿರುವ ರೈತರಿಗೆ ಮಾಡಿದ ಖರ್ಚು ಕೂಡ ಬಾರದಂಥ ಸ್ಥಿತಿ ಇದೆ. ಬೆಲೆ ಕುಸಿತದ ಕಾರಣ ರೈತರು ಜಿಲ್ಲೆಯ ಕೋಲ್ಡ್ ಸ್ಟೋರೆಜ್ ಗಳಲ್ಲಿ ಸಂಗ್ರಹ ಮಾಡುತ್ತಿದ್ದು, ಸುಮಾರು 26 ಸಾವಿರ ಟನ್ ಮೆಣಸಿನಕಾಯಿ ದಾಸ್ತಾನು ಮಾಡಲಾಗಿದೆ.

ರಫ್ತು ಕೊರತೆ ಕಾರಣ

ಒಂದು ವರ್ಷದಿಂದ ವಿದೇಶಗಳಿಗೆ ರಫ್ತು ಕೊರತೆಯಿಂದ ಮೆಣಸಿನಕಾಯಿ ಬೆಲೆ ಸತತವಾಗಿ ಕುಸಿಯುತ್ತಿದೆ. ಜೊತೆಗೆ ಸ್ಥಳೀಯ ಮಾರುಕಟ್ಟೆ ವ್ಯವಸ್ಥೆಗಳು ಇಲ್ಲದೆ ರೈತರಿಗೆ ದಿಕ್ಕು ತೋಚದಂತಾಗಿದೆ.

ಒಂದು ಎಕರೆಯಲ್ಲಿ ಮೆಣಸಿನಕಾಯಿ ಬೆಳೆಯಲು ಒಂದು ಲಕ್ಷ ಖರ್ಚು ಮಾಡಲಾಗುತ್ತಿದೆ. ಇದೀಗ ಬೆಲೆ ಕುಸಿತವಾಗಿ ದೂರದ ಬ್ಯಾಡಗಿಗೆ ಕೊಂಡೊಯ್ಯಲಾಗುತ್ತಿಲ್ಲ. ಸರಕಾರ ಜೋಳ, ಹತ್ತಿ ಧಾರಣೆ ಕುಸಿದಾಗ ಖರೀದಿ ಕೇಂದ್ರ ಆರಂಭಿಸಿ ಖರೀದಿಸುವಂತೆ ಸರಕಾರ ಒಣ ಮೆಣಸಿನಕಾಯಿ ಕೂಡ ಖರೀದಿಸಬೇಕು. ಬ್ಯಾಡಗಿ ಮೆಣಸಿನಕಾಯಿಯನ್ನ ಕನಿಷ್ಠ 30 ರಿಂದ 35 ಸಾವಿರ ರು.ಗೆ ಖರೀದಿಸಿ ರೈತರಿಗೆ ನೆರವಾಗಬೇಕು.

-ಶಿವಶರಣಗೌಡ ಮರಕಂದಿನ್ನಿ, ರೈತ

ರಾಯಚೂರು ಜಿಲ್ಲೆಯಲ್ಲಿ ಅತ್ಯಧಿಕ ಮೆಣಸಿನಕಾಯಿ ಬೆಳೆಯುತ್ತಿರುವುದು ಕಂಡ ಸರಕಾರ 25 ಕೋಟಿ ವೆಚ್ಚದಲ್ಲಿ ಹತ್ತಿ ಮಾರುಕಟ್ಟೆ ಹಿಂಭಾಗದಲ್ಲಿ ಹದಿಮೂರುವರೆ ಎಕರೆಯಲ್ಲಿ ಮೆಣಸಿನಕಾಯಿ ಮಾರುಕಟ್ಟೆ ನಿರ್ಮಿಸಲು ಮುಂದಾಗಿದೆ. ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಡಿಸೆಂಬರ್ ಅಥವಾ ಜನೆವರಿ ತಿಂಗಳಲ್ಲಿ ಮಾರುಕಟ್ಟೆ ಕಾಮಗಾರಿ ಪೂರ್ಣಗೊಳ್ಳಲಿದೆ.

-ಆದಪ್ಪಗೌಡ, ಕಾರ್ಯದರ್ಶಿ, ಎಪಿಎಂಸಿ, ರಾಯಚೂರು

Viswavani Pg 11



ಯಾವ ತಳಿಗೆ ಎಷ್ಟು ಬೆಲೆ ಪ್ರತಿ ಕ್ವಿಂಟಾಲ್‌ಗೆ

- ಬ್ಯಾಡಗಿ ಡಬ್ಬಿ ಮೆಣಸಿನಕಾಯಿಗೆ 14ರಿಂದ 18 ಸಾವಿರ ರು.
- ಕಡ್ಡಿ ಬ್ಯಾಡಗಿ ಮೆಣಸು 12 ರಿಂದ 15 ಸಾವಿರ ರು.
- ನಂ.ಫೈವ್) ಮೆಣಸಿನಕಾಯಿ 6 ಸಾವಿರದಿಂದ 8 ಸಾವಿರ ರು.
- ಸೂಪರ್ ಟೆನ್ ಮೆಣಸಿನಕಾಯಿ 6ರಿಂದ 8 ಸಾವಿರ ರು.
- 5531 ಮೆಣಸಿನಕಾಯಿ 5 ಸಾವಿರದಿಂದ 8 ಸಾವಿರ ರು.
- 2043 6 ರಿಂದ 10 ಸಾವಿರ ರು.ಗೆ ಸಂಕಷ್ಟಕ್ಕೆ ಕಾರಣ



PRIORITISE CLEARING EXISTING STOCKS

US Firms Pause Imports of Rubber Products


Around 15,000 MSMEs in India face uncertainty due to tariff disadvantage; industry to appeal for sops

Sutanuka Ghosal

Kolkata: US President Donald Trump's reciprocal tariffs are compelling US importers of rubber products to halt supplies from India, instead prioritising clearing their existing stocks.

The tariffs of 26% on products such as rubber gloves, pneumatic tyres, waterproof rubber sheets and mittens are causing uncertainty in the Indian industry amid fears of job losses. Indian producers are also worried that rivals Turkey and Vietnam will face only 10% and nil tariffs respectively. "This move by the US buyers will impact 15,000 micro, small and medium enterprises (MSMEs) that are engaged in rubber products production across the country," said Shashi Singh, president of All India Rubber Industries Association (AIRIA).

US buyers have communicated to their Indian vendors that they would place fresh orders only after exhausting their inventory. Singh, however, said by that time, Indian manufacturers will face a significant disadvantage over their competitors.



UNCERTAIN TIMES

Indian producers are worried that rivals Turkey and Vietnam will face only 10% and nil tariffs respectively

"Our major concern is the significant 26% import tariff currently imposed on Indian rubber goods entering the US market. This puts us at a serious disadvantage, especially when compared to Turkey, which faces only a 10% tariff, and Vietnam, which offers a nil tariff to the US under its trade agreement with the US," said Singh. He said these disparities are likely to see the US market get increasingly dominated by cheaper imports from Turkey and Vietnam, severely undercutting Indian exporters. "By the time fresh orders are placed by the US buyers, the pricing gap could further strain our foothold in this critical market," he said.

In FY24, India exported rubber products worth ₹7,505 crore to the US, comprising more than 20% of India's total rubber product exports globally. Many of the MSMEs depend on the US market for survival. Singh said these units earn as much as 30-90% of businesses from the US. "With this high tariff, the uncertainty has also increased for the workers engaged in these units," Singh said.

A rubber product producer and a member of AIRIA said nearly all his business comes from the US. "My unit produces rubber membrane, which is widely used for waterproofing applications, especially in roofing, pond and pool liners in the US. I have been asked by the US buyers to temporarily stop production. I do not know what lies ahead," the person said on condition of anonymity.

Singh said the industry body will write to the commerce ministry next week for incentives and subsidies to allow domestic companies to reduce their manufacturing cost and stay competitive in the US market. "The situation is very volatile now, and there, even the US buyers have no clarity," he said.

Eco Times Pg 07